# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 351 (2530)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು : ವಸತಿ ಸಚಿವರು

ವಿಷಯ : ನಿವೇಶನ ಹಾಗೂ ಬ್ಲಾಕ್ ಆದ ಮನೆಗಳ ಬಗ್ಗೆ

(ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಯಾವ ಯಾವ ಗ್ರಾಮ ಪಂಚಾಯತ್‌ಗಳಲ್ಲಿ ಎಷ್ಟು ನಿವೇಶನಗಳನ್ನು ಗುರುತಿಸಲಾಗಿದೆ; ಕಂದಾಯ ಇಲಾಖೆಯಿಂದ ನಿವೇಶನಕ್ಕಾಗಿ ಹಸ್ತಾಂತರಗೊಂಡಿರುವ ನಿವೇಶನ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಅವುಗಳ ವಿಸ್ತೀರ್ಣ ಎಷ್ಟು; ಬಾಕಿಯೆಷ್ಟು; ಗಡಿಗುರುತು ಮಾಡಿ ನಿವೇಶನ (site) ಗಳಾಗಿ ವಿಂಗಡಿಸಿದ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳ ವಿಸ್ತೀರ್ಣ ಎಷ್ಟು; ಬಾಕಿಯೆಷ್ಟು; (ಗ್ರಾಮವಾರು ಮಾಹಿತಿ ನೀಡುವುದು)

(ಆ) ಕಳೆದ 3 ವರ್ಷಗಳಲ್ಲಿ ನಿವೇಶನ (site) ಗಳಾಗಿ ವಿಂಗಡಿಸಿ ಹಕ್ಕು ಪತ್ರ ವಿತರಣೆ ಮಾಡಿದ ಸಂಖ್ಯೆ ಫಲಾನುಭವಿಗಳ ಸಂಖ್ಯೆ ಎಷ್ಟು; ಹಕ್ಕು ಪತ್ರ ಮಂಜೂರಾತಿಯಾಗಿ ಗಡಿ ಗುರುತು ಮಾಡಿ ಫಲಾನುಭವಿಗಳ ಸ್ವಾಧೀನಕ್ಕೆ ನೀಡದೆ ಇರುವಂತಹ ನಿವೇಶನಗಳ ಸಂಖ್ಯೆ ಎಷ್ಟು; ಹಕ್ಕು ಪತ್ರ ವಿತರಣೆ ಮಾಡಲು ಬಾಕಿಯಿರುವ ಸಂಖ್ಯೆ ಎಷ್ಟು; ಬಾಕಿಯಿರಲು ಕಾರಣ ವೇನು; (ಗ್ರಾಮವಾರು ಮಾಹಿತಿ ನೀಡುವುದು)

(ಇ) ಕಳೆದ 3 ವರ್ಷಗಳಲ್ಲಿ ವಸತಿ ಯೋಜನೆಯಲ್ಲಿ ವಿವಿಧ ಕಾರಣಗಳಿಗೆ ಬ್ಲಾಕ್ ಆದ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಅವುಗಳನ್ನು ಯಾವಾಗ ಅನ್‌ಬ್ಲಾಕ್ ಮಾಡಿ ಜಿಪಿಎಸ್‌ಗೆ ಅವಕಾಶ ಕಲ್ಪಿಸಲಾಗುವುದು?